

# ಡ್ರ್ಯಾಗ್‌ಫ್ಲಿಕ್ ಸ್ಪೆಷಲಿಸ್ಟ್ ಹರ್ಮನ್

■ ಗಿರೀಶ ದೊಡ್ಡಮನಿ

**ಭಾರತೀಯ ಹಾಕಿಪ್ರಿಯರಲ್ಲಿ ಹೊಸ ಕನಸು ಚಿಗುರಿಸಿರುವ ಹರ್ಮನ್‌ಪ್ರೀತ್ ಸಿಂಗ್, ಭಾರತ ತಂಡವು ವಿಶ್ವಕಪ್ ಟೂರ್ನಿಗೆ ನೇರ ಅರ್ಹತೆ ಗಿಟ್ಟಿಸುವಲ್ಲಿ ಬಹು ದೊಡ್ಡ ಪಾತ್ರ ವಹಿಸಿದ್ದಾರೆ.**

ಭಾರತ ಹಾಕಿ ತಂಡವು ವಿಶ್ವಕಪ್ ಗೆದ್ದು ಐವತ್ತು ವರ್ಷಗಳು ಸರಿದುಹೋಗಿವೆ. ಈ ಅವಧಿಯಲ್ಲಿ ಭಾರತದಲ್ಲಿ ಬಹಳಷ್ಟು ಪ್ರತಿಭಾವಂತ ಹಾಕಿಪಟುಗಳು ಬಂದು ಛಾಪು ಮೂಡಿಸಿದ್ದಾರೆ. ಆದರೆ ಅವರ ಪ್ರಯತ್ನಗಳಿಗೆ ವಿಶ್ವ ಕಿರೀಟದ ಫಲ ದೊರೆತಿಲ್ಲ.

ಇದೀಗ ಮತ್ತೊಮ್ಮೆ ವಿಶ್ವ ಚಾಂಪಿಯನ್ ಪಟ್ಟಕ್ಕೇರುವ ಬಲವಾದ ನಿರೀಕ್ಷೆ ಮೂಡಿದೆ. ಅದಕ್ಕೆ ಕಾರಣ ಹರ್ಮನ್‌ಪ್ರೀತ್ ಸಿಂಗ್ ಎಂಬ ನಾಯಕ ಮತ್ತು ಡ್ರ್ಯಾಗ್‌ಫ್ಲಿಕ್ ಪರಿಣತ.

ಹೌದು, ಈಚೆಗೆ ಬಿಹಾರದ ರಾಜಗೀರ್‌ನಲ್ಲಿ ನಡೆದ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಭಾರತ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸುವಲ್ಲಿ ಹರ್ಮನ್ ನಾಯಕತ್ವ ಮತ್ತು ಆಟದ ಪಾಲು ದೊಡ್ಡದು. ಈ ಟೂರ್ನಿಯಲ್ಲಿ ಅವರು ಒಟ್ಟು ಅರ್ಧ ಡಜನ್ ಗೋಲುಗಳ ಕಾಣಿಕೆ ನೀಡಿದ್ದಾರೆ. ಅಲ್ಲದೇ ಯುವ ಆಟಗಾರರೇ ಹೆಚ್ಚಿನ ಸಂಖ್ಯೆಯಲ್ಲಿದ್ದ ತಂಡವನ್ನು ಸಮರ್ಥವಾಗಿ ಮುನ್ನಡೆಸಿದ್ದಾರೆ. ಈ ಪ್ರಶಸ್ತಿ ಗೆಲುವಿನಿಂದಾಗಿ ಭಾರತ ತಂಡವು ವಿಶ್ವಕಪ್ ಟೂರ್ನಿಗೆ ನೇರ ಅರ್ಹತೆ ಗಿಟ್ಟಿಸಿದೆ. ಅದಕ್ಕಾಗಿಯೇ ಭಾರತೀಯ ಹಾಕಿಪ್ರಿಯರಲ್ಲಿ ಹೊಸ ಕನಸು ಚಿಗುರಿದೆ. ಇದು ಖಂಡಿತವಾಗಿಯೂ ಹಗಲುಗನಸಲ್ಲ. ಹರ್ಮನ್ ಅವರ ಅನುಭವ ಮತ್ತು ಕೌಶಲಗಳನ್ನು ನೋಡುತ್ತ ಬಂದವರಿಗೆ ಕನಸು ನನಸಾಗುವ ಭರವಸೆಯೂ ಇರುವುದು ಸಹಜ.

ಒಲಿಂಪಿಕ್ಸ್‌ನಲ್ಲಿ ಅತ್ಯಧಿಕ ಪದಕಗಳನ್ನು ಗೆದ್ದ ದಾಖಲೆ ಇರುವ ಭಾರತ ತಂಡವು ಸುಮಾರು 41 ವರ್ಷಗಳ ವೈಫಲ್ಯದ ಕರಿನೆರಳಲ್ಲಿ ಇತ್ತು. ನಾಲ್ಕು ದಶಕಗಳಲ್ಲಿ ಒಂದೇ ಒಂದು ಪದಕವೂ ಒಲಿದಿರಲಿಲ್ಲ. ಆದರೆ ಆ 'ಪದಕ ಬರಗಾಲ'ವು 2021ರಲ್ಲಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅಂತ್ಯ ಕಂಡಿತು. ಆಗ ನಾಯಕರಾಗಿದ್ದ ಮನಪ್ರೀತ್ ಸಿಂಗ್ ಅವರೊಂದಿಗೆ ಬೆಂಬಲವಾಗಿ ನಿಂತವರು ಹರ್ಮನ್. ಆಗ ಗೋಲ್‌ಕೀಪರ್ ಆಗಿದ್ದ ದಿಗ್ಗಜ ಪಿ.ಆರ್. ಶ್ರೀಜೇಶ್, ಮನಪ್ರೀತ್ ಮತ್ತು ಹರ್ಮನ್‌ಪ್ರೀತ್ ಅವರ ಅನುಭವ ಹಾಗೂ ಛಲದಿಂದಾಗಿ ಕಂಚಿನ ಪದಕ ಒಲಿಯಿತು.

ಆ ಒಲಿಂಪಿಕ್ಸ್‌ನ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಡಿಫೆಂಡರ್ ಹರ್ಮನ್ ಅವರು ಎರಡು ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಗಳಿಸಿದ್ದು ತಂಡದ ಯಶಸ್ಸಿನ ಹಾದಿಗೆ ಮುನ್ನುಡಿ ಬರೆಯಿತು. ಗುಂಪು ಹಂತದ ಪಂದ್ಯಗಳಲ್ಲಿ ಮತ್ತು ನಾಕೌಟ್ ಹಂತದಲ್ಲಿ ಅವರ ಆಟದ ಸೊಬಗು ಮುಂದುವರಿಯಿತು. ಸೆಮಿಫೈನಲ್‌ನಲ್ಲಿ ಅವರು ಬೆಲ್ಜಿಯಂ ಎದುರು ಕೂಡ ಗೋಲು ಗಳಿಸಿದ್ದರು. ಕಂಚಿನ ಪದಕದ ಸುತ್ತಿನಲ್ಲಿಯೂ ತಮ್ಮ ಕೈಚಳಕ ಮೆರೆದಿದ್ದರು. ಆ ಒಲಿಂಪಿಕ್ಸ್‌ನಲ್ಲಿ ಅವರು ಭಾರತದ ಪರ ಅತ್ಯಧಿಕ ಗೋಲು (6) ಗಳಿಸಿದ ಆಟಗಾರರಾಗಿದ್ದರು.

2024ರ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಹರ್ಮನ್ ಪಾಲಿಗೆ ನಾಯಕತ್ವ ಒಲಿದುಬಂದಿತು. ಅನುಭವಿ ಮನಪ್ರೀತ್ ಕೂಡ ತಂಡದಲ್ಲಿದ್ದರು. ಈ ಕೂಟದಲ್ಲಿಯೂ ಭಾರತಕ್ಕೆ ಕಂಚಿನ ಪದಕ ಒಲಿಯಿತು. ಸ್ವಲ್ಪದರಲ್ಲಿ ಫೈನಲ್ ಪ್ರವೇಶದ ಅವಕಾಶ ತಂಡಕ್ಕೆ ಕೈತಪ್ಪಿತ್ತು. ಆದರೆ ಪದಕವಂತೂ ಲಭಿಸಿತ್ತು. ಈ ಕೂಟದಲ್ಲಿ ನಾಯಕತ್ವದ ಒತ್ತಡದಲ್ಲಿಯೂ ಅವರು ಒಟ್ಟು 10 ಗೋಲು ಹೊಡೆದಿದ್ದರು. ಇದು ಅವರ ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಒಂದು ನಿದರ್ಶನ. ಅವರ ಗಟ್ಟಿತನಕ್ಕೆ ಬಾಲ್ಯದಿಂದ ಬೆಳೆದು ಬಂದಿದ್ದ ವಾತಾವರಣವೂ ಕಾರಣ.